**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ**

**ಚಿಕ್ಕೋಡಿ**

CC No.:- 4177/2023

C.W.:-11

P.W.:-7

| | |
|---|---|
| ಸಾಕ್ಷಿದಾರನ ಹೆಸರು | ನಾನಾಸಾಹೇಬ ನಾಯಿಕ |
| ತಂದೆಯ ಹೆಸರು | ಬಾಳಕೃಷ್ಣ |
| ವಯಸ್ಸು | 63 ವರ್ಷ |
| ಕೆಲಸ | ಒಕ್ಕಲುತನ |
| ವಾಸ | ನನದಿವಾಡಿ |

ಸಾಕ್ಷಿಗೆ ಈ ದಿನ ದಿಃ 20-08-2026 ರಂದು ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭೀಯೋಜಕರಿಂದಃ**

ಚಾಸಾ 1 ಮತ್ತು 10 ನನ್ನ ಸಹೋದರರು. ಚಾಸಾ 9,12 ಮತ್ತು 13 ರವರ ಪರಿಚಯ ಇರುತ್ತಾರೆ.

ದಿಃ18.03.2023 ರಂದು ಬೆಳಗ್ಗೆ 10.30 ಗಂಟೆಗೆ ನಮ್ಮ ಹೊಲದಲ್ಲಿ ನೀರು ಬಿಡುತ್ತಿರುವಾಗ ಚಾಸಾ 9 ರವರು ಚಾಸಾ 1 ರವರ ಹತ್ತಿರ ಬಂದು ಚಾಸಾ 10 ರವರಿಗೆ ಹೊಡೆದಿರುತ್ತಾರೆ ಎಂದು ಹೇಳಿದ ನಂತರ ನಾನು ಮತ್ತು ಚಾಸಾ 1 ಸೇರಿ ಘಟನಾ ಸ್ಥಳಕ್ಕೆ ಹೋಗಿ ನೋಡಿದಾಗ ಅಲ್ಲಿ ಚಾಸಾ 10 ರವರು ಇದ್ದರು. ಅವರಿಗೆ ಕೇಳಲಾಗಿ ರಾಶಿ ಮಶೀನ್ ತರಲು ತನ್ನ ದ್ವಿಚಕ್ರ ವಾಹನದ ಸಂಖ್ಯೆ ಕೆ ಎ 6881 ಮೇಲೆ ಹೋಗುತ್ತಿರುವಾಗ ಅವರಿಗೆ ಅಡ್ಡ ಗಟ್ಟಿ ಶಂಕರ ಈಶ್ವರ ಯಕ್ಸಂಬೆ, ನಿತಿನ್ ಈಶ್ವರ ಯಕ್ಸಂಬೆ, ಅರ್ಜುನ ಈಶ್ವರ ಯಕ್ಸಂಬೆ ಹಾಗೂ ಪುಂಡಲೀಕ ಅರ್ಜುನ ಯಕ್ಸಂಬೆ, ನನಗೆ ಹೊಡೆದು ಬೋಸಡಿಚಾ ರಾಂಡಿಚಾ ಊರಿನಲ್ಲಿ ಸ್ಮಶಾನ ಜಮೀನು ಕುರಿತು ಏನ ಲೀಡರ್ಕಿ ಮಾಡುತ್ತಿ ಅಂತಾ ಅವಾಚ್ಯ ಶಬ್ದಗಳಿಂದ ಬೈದು ರಾಡ್‌ದಿಂದ 4 ನೇ ಆರೋಪಿಯು ತಲೆಗೆ ಹೊಡೆದು,ನಂತರ ಉಳಿದ ಆರೋಪಿತರು ಕೈಯಿಂದ ಹೊಡಿ ಬಡಿ ಮಾಡಿ ಇನ್ನೊಮ್ಮೆ ನಮ್ಮ ತಂಟೆಗೆ ಬಂದರೆ ನಿನ್ನ ಜೀವ ಸಹಿತ ಬಿಡುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿ ಹೋಗಿರುತ್ತಾರೆ ಎಂದು ಚಾಸಾ 10 ರವರು ತಿಳಿಸಿದರು. ಆಗ ಚಾಸಾ 10 ರವರು ತಲೆ ಕೆಳಗೆ ಮಾಡಿ ಬಿದಿದ್ದರು ಅವರ ತಲೆಯಿಂದ ರಕ್ತ ಬರುತ್ತಿತ್ತು. ನಂತರ ಚಾಸಾ 10 ರವರನ್ನು ಚಾಸಾ 1 ಮತ್ತು ನಾನು

ಸದಲಗಾದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ, ನಂತರ ಅಲ್ಲಿಂದ ಹೆಚ್ಚಿನ ಉಪಚಾರಕ್ಕಾಗಿ ಚಿಕ್ಕೋಡಿಯ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಮುಂದೆ ಹೆಚ್ಚಿ ನ ಉಪಚಾರಕ್ಕಾಗಿ ನಿಪ್ಪಾಣಿಯ ನಿರ್ಮಲೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಈ ವಿಷಯದ ಕುರಿತು ಚಾಸಾ 11 ರವರು ಪೊಲೀಸರಿಗೆ ಫಿರ್ಯಾದಿಯನ್ನು ನೀಡಿರುತ್ತಾರೆ. ದಿಃ21.03.2023 ರಂದು ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸುತ್ತೇನೆ. ಆ ದಿನ ಕೃತ್ಯಕ್ಕೆ ಬಳಿಸಿರುವ ರಾಡ್ ನ್ಯಾಯಾಲಯದ ಮುಂದೆ ಸಾಕ್ಷಿ ನೋಡಿ ಗುರುತಿಸುತ್ತಾರೆ. ಅದನ್ನು ಈಗಾಗಲೇ ಮುದ್ದೆ ಮಾಲು 1 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಎಸ್ ಡಿ ವಕೀಲರಿಂದಃ**

ಘಟನೆ ಪೂರ್ವದಲ್ಲಿ ಒಂದು ವರ್ಷದಿಂದ ರಸ್ತೆ ಕುರಿತು ನಮ್ಮ ಹಾಗೂ ಆರೋಪಿತರ ಮಧ್ಯೆ ಜಗಳ ಆಗಿರುತ್ತದೆ. ದಿಃ24.11.2022 ರಂದು ನನ್ನ ಹಾಗೂ ಇನ್ನಿತರ 19 ಜನರ ವಿರುದ್ಧ ದಂಡ ಪ್ರಕ್ರಿಯೆ ಸಂಹಿತೆ ಕಲಂ 107 ರಡಿಯಲ್ಲಿ ಪ್ರಕರಣ ದಾಖಲ ಮಾಡಿರುತ್ತಾರೆ ಎಂದರೆ ಸರಿ. 4 ನೇ ಆರೋಪಿತರು ನನ್ನ ಹಾಗೂ ಉಳಿದ ಸಾಕ್ಷಿದಾರರ ವಿರುದ್ಧ ಕೊಲೆ ಪ್ರಯತ್ನ ಕೇಸ ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣ ಮಾನ್ಯ ಜಿಲ್ಲಾ ಸತ್ರ ನ್ಯಾಯಾಲಯದಲ್ಲಿ ಚಾಲತಿಯಲ್ಲಿ ಇರುತ್ತದೆ ಎಂದರೆ ಸರಿ.

ದಿಃ18.03.2023 ರಂದು 8.30 ಗಂಟೆಗೆ 4 ನೇ ಆರೋಪಿತನಿಗೆ ರಾಡಿದಿಂದ ಹೊಡೆದಿದ್ದರಿಂದ ಆತನ ಕೈ ಮುರಿದು ಆಸ್ಪತ್ರೆಯಲ್ಲಿ ದಾಖಲ ಆಗಿದ್ದ ಎಂದರೆ ಸರಿಯಲ್ಲ. ಅದೇ ದಿನ ಬೆಳಗ್ಗೆ 9.00 ಗಂಟೆಗೆ ಸುವರ್ಣ ಮಾರುತಿ ನಾಯಿಕ ಎನ್ನುವವರು ಆರೋಪಿತರ ವಿರುದ್ಧ ಇನ್ನೊಂದು ಫಿರ್ಯಾದಿಯನ್ನು ದಾಖಲಿಸಿರುತ್ತಾರೆ ಅದರ ಸಿ ಸಿ ನಂಬರ 1623/2024 ಆಗಿರುತ್ತದೆ ಎಂದರೆ ಸಾಕ್ಷಿಯು ನಮಗೆ ಸಂಬಂಧ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ನಾನು ಸಾಕ್ಷಿ ಆಗಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ.

ಸ್ಮಶಾನಕ್ಕೆ ಹೋಗಿ ಬರಲು ರಸ್ತೆ ಬೇಕಾಗುತ್ತದೆ ಉಪ ವಿಭಾಗಾಧಿಕಾರಿಗಳ ಚಿಕ್ಕೋಡಿ ರವರಿಗೆ ಅರ್ಜಿ ಸಲ್ಲಿಸಿರುತ್ತೇವೆ ಎಂದರೆ ಸರಿ. ಅಲ್ಲಿ ಯಾವುದೇ ರಸ್ತೆ ಇರುವುದಿಲ್ಲ ಎಂದು ಆದೇಶ ಆಗಿರುತ್ತದೆ ಎಂದರೆ ಸರಿ.

ದಿಃ18.03.2023 ರಂದು ಬೆಳಗ್ಗೆ 10.30 ಗಂಟೆಗೆ ನಾನು ಹೊಲದಲ್ಲಿ ನೀರು ಬಿಡುತ್ತಿರುವಾಗ ಚಾಸಾ 1 ರವರು ಬಂದು ಚಾಸಾ 10 ರವರಿಗೆ ಹೊಡೆದಿರುತ್ತಾರೆ ಎಂದು ಪೊಲೀಸರ ಮುಂದೆ ನಾನು ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 9 ರವರು ನನ್ನ ಹಾಗೂ ಚಾಸಾ 1 ರವರ ಹತ್ತಿರ ಬಂದು ಜಗಳ ಆಗಿದ್ದ ವಿಷಯ ತಿಳಿಸಿರುತ್ತಾರೆ ಎಂದು ನಾನು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿಗೆ ಅವರ ಹೇಳಿಕೆಯ ತೋರಿಸಿ

“ದಿನಾಂಕಃ18.03.2023 ರಂದು ಬೆಳಗ್ಗೆ 11.45 ಗಂಟೆಯ ಸಮಯದಲ್ಲಿ ಕಲ್ಲಪ್ಪಾ ಈತನು ಕೆಲಸ ಮಾಡುತ್ತಿದ್ದಾಗ ನಾನು ಅವರ ಹತ್ತಿರ ಹೋಗಿ ಮಾತನಾಡುತ್ತಿದ್ದಾಗ ನಮ್ಮ ಸಂಬಂದಿ ಸಿದ್ದಪ್ಪಾ ದತ್ತು ನಾಯಿಕ ಈತನು ನಮ್ಮಗಳ ಹತ್ತಿರ ಬಂದು ನನದಿವಾಡಿ ಗ್ರಾಮ ಹದ್ದಿಯ ಬಾಳಾಸಾಹೇಬ ವಡ್ಡರ ಇವರ ಜಮೀನು ಹತ್ತಿರ ಯಕ್ಸಂಬಾ ಚಿಕ್ಕೋಡಿ ರಸ್ತೆಯ ಮೇಲೆ ನಿಮ್ಮ ಸಂಬಂಧಿಕರಾದ" ಎಂದು ಹೇಳಿಕೆ ನೀಡಿರುತ್ತೇನೆ ಎಂದು ಸೂಚಿಸಿದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ನಿರಾಕರಿಸಿದ ಹೇಳಿಕೆ ಭಾಗವನ್ನು ನಿಡಿ 3 ಎಂದು ಗುರುತಿಸಲಾಯಿತು. ಘಟನಾ ಸ್ಥಳದಲ್ಲಿ ಚಾಸಾ 10 ರವರು ಒಬ್ಬರೆ ಇದ್ದರು. ಚಾಸಾ 10 ರವರು ರಸ್ತೆಯ ಪಶ್ಚಿಮ ದಿಕ್ಕಿಗೆ ಬಿದಿದ್ದರು. ಸ್ಥಳದಲ್ಲಿ ರಕ್ತ ಬಿದ್ದಿತ್ತು. ಸದರಿಯವರಿಗೆ ನಾನು ರುಮಾಲ್‌ದಿಂದ ರಕ್ತ ಒರೆಯಿಸಿರುತ್ತೇನೆ. ನನ್ನ ಬಟ್ಟೆಗೆ ರಕ್ತ ಹತ್ತಿರುವುದಿಲ್ಲ. ಪೊಲೀಸರಿಗೆ ರಕ್ತ ಹತ್ತಿದ ರುಮಾಲ್ ನ್ನು ಕೊಟ್ಟಿರುವುದಿಲ್ಲ. ಚಾಸಾ 10 ರವರ ಬಟ್ಟೆಯ ಮೇಲೆ ರಕ್ತ ಹತ್ತಿತ್ತು. ನಾವು ಚಾಸಾ 10 ರವರಿಗೆ ಆಸ್ಪತ್ರೆಗೆ ಕರೆದುಕೊಂಡು ಹೋದ ನಂತರ ಪೊಲೀಸರು ಆಸ್ಪತ್ರೆಗೆ ಬಂದಿರುವುದಿಲ್ಲ.

ಚಾಸಾ 10 ರವರು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. 3 ದಿನಗಳ ನಂತರ ಮಾತನಾಡಲು ಪ್ರಾರಂಭಿಸಿರುತ್ತಾರೆ. ರಸ್ತೆಯ ಪಕ್ಕದಲ್ಲಿ ಬಿದ್ದಿರುವ ವಾಹನದ ಹತ್ತಿರ ಮುದ್ದೆ ಮಾಲು 1 ಬಿದ್ದಿತ್ತು. ಸದರಿ ಮುದ್ದೆ ಮಾಲು 1 ರಸ್ತೆ ಪಕ್ಕದಲ್ಲಿ ಬಿದ್ದಿರುವ ಬಗ್ಗೆ ನಾನು ನನ್ನ ಹೇಳಿಕೆಯಲ್ಲಿ ಉಲ್ಲೇಖ ಮಾಡಿರುತ್ತೇನೆ. ನಾನು ಈ ರೀತಿ ಹೇಳಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲು 1 ಕ್ಕೆ ರಕ್ತದ ಹತ್ತಿರುತ್ತದೆ. ಪೊಲೀಸರಿಗೆ ಮುದ್ದೆ ಮಾಲು 1 ನ್ನು ಯಾರು ಕೊಟ್ಟಿರುತ್ತಾರೆ ಎನ್ನುವುದು ಗೊತ್ತಿಲ್ಲ. ನಾವು ಮೊದಲು ಆಸ್ಪತ್ರೆಗೆ ಹೋಗಿ ನಂತರ ಪೊಲೀಸ ಠಾಣೆಗೆ ಹೋಗಿರುತ್ತೇವೆ. ಸದರಿ ಘಟನೆ ಬಗ್ಗೆ ದಿಃ21.03.2023 ರಂದು ನಾನು ಪೊಲೀಸರಿಗೆ ಮಾಹಿತಿ ನೀಡಿರುತ್ತೇನೆ. ವೈದ್ಯರು ಚಾಸಾ 10 ರವರಿಗೆ ಹೆಚ್ಚಿನ ಉಪಚಾರ ಅವಶ್ಯಕತೆ ಇರುತ್ತದೆ ಎಂದು ಯಾವುದೇ ಬರವಣಿಗೆಯಲ್ಲಿ ಹೇಳಿರುವುದಿಲ್ಲ. ನಿರ್ಮಲೆ ಆಸ್ಪತ್ರೆಯಲ್ಲಿ 3 ದಿನ ಇದ್ದೇವು. ಯಾವ ಆರೋಪಿ ಯಾವುದರಿಂದ ಮತ್ತು ಎಷ್ಟು ಹೊಡೆತಗಳು ಹೊಡೆದಿರುತ್ತಾರೆ ಎಂದು ಹೇಳಲು ಆಗುವುದಿಲ್ಲ.

ಆರೋಪಿತರು ಚಾಸಾ 10 ರವರಿಗೆ ಯಾವುದೇ ತರಹದ ಅಡ್ಡ ಗಟ್ಟಿ ನಿಲ್ಲಿಸಿ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ 10 ರವರಿಗೆ ಕೈಯಿಂದ ಮತ್ತು ರಾಡ್‌ದಿಂದ ಹೊಡಿ ಬಡಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಯಾವುದೇ ಘಟನೆ ಆಗದೆ ಇದ್ದರೂ ಸಹ ರುದ್ರಭೂಮಿಗೆ ದಾರಿ ಪಡೆಯುವ ಉದ್ದೇಶದಿಂದ

ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ ಚಾಸಾ 1 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ